**ಶ್ರೀ ಡಿ. ಬಿ. ಇನಾಂದಾರ್.**—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ, ಬೇರೆ ಪ್ರಶ್ನೆ ಕೇಳಿದರೆ, ಉತ್ತರ ತರಿಸಿಕೊಡುತ್ತೇನೆ.

(ಗೊಂದಲ)

**ಅಧ್ಯಕ್ಷರು.**—ಇದರ ಬಗ್ಗೆ ಹಾಫ್ ಆ್ಯನ್ ಹವರ್ ಡಿಸ್‌ಕಷನ್‌ಗೆ ಹಾಕಿ ನಾನು ಅವಕಾಶ ಕೊಡುತ್ತೇನೆ.

**SRI M. MALLIKARJUNA KHARGE.**—If so, the action taken against those who have violated the said rules, ಎಂದು ಉತ್ತರದಲ್ಲಿ ಬಂದಿದೆ. ಇದಕ್ಕಲ್ಲಿ ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ತಾವು ಬೇರೆ ಪ್ರಶ್ನೆ ಕೇಳಿ ಅಂದರೆ ಹೇಗೆ ?

**ಅಧ್ಯಕ್ಷರು.**—ಹಾಫ್ ಅನ್ ಹವರ್ ಡಿಸ್‌ಕಷನ್‌ಗೆ ಕೇಳಿ ನಾನು ಅವಕಾಶ ಕೊಡುತ್ತೇನೆ.

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೈಕ್ ಸ್ವಿಚ್ ಹಾಕಿ ಕೊಳ್ಳದೆ ಉತ್ತರ ಹೇಳಿ ಕುಳಿತುಬಿಟ್ಟರೆ ನಮಗೆ ಹೇಗೆ ಅರ್ಥವಾಗಬೇಕು.

**ಶ್ರೀ ಗೋಪಾಲ ಮುಕುಂದ ಕಾನಡೆ.**—ಅಧ್ಯಕ್ಷರೆ, ನಮಗೆ ಉಪ ಪ್ರಶ್ನೆ ಕೇಳಲಿಕ್ಕೆ ಇನ್ನೂ ಅವಕಾಶ ಕೊಡಬೇಕು.

ಅಧ್ಯಕ್ಷರು.— ಮಾನ್ಯ ಕಾನಡೆಯವರೆ, ತಾವು ಹಾಫ್ ಅನ್ ಹವರ್ ಡಿಸ್‌ಕಷನ್‌ಗೆ ಕೇಳಿ ನಾನು ಅವಕಾಶ ಕೊಡುತ್ತೇನೆ.

**ಶ್ರೀ ಪಟಮಕ್ಕಿರತ್ನಾಕರ್.**—ಅಧ್ಯಕ್ಷರೆಮಂತ್ರಿಗಳಿಂದ ಸಮರ್ಪಕವಾಗಿ ಉತ್ತರ ಬರಬೇಕು. ಇಲ್ಲದೇ ಇದ್ದರೆ ನಾವು ಹೇಗೆ ಅರ್ಥಮಾಡಿಕೊಳ್ಳಬೇಕು.

**ಅಧ್ಯಕ್ಷರು.**—ಈಗ ನಾನು ಆಫ್ ಅನ್ ಹವರ್ ಡಿಸ್‌ಕಷನ್‌ಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ದಯವಾಮಾಡಿ ಕುಳಿತುಕೊಳ್ಳಿ. ಈಗ ಮುಂದಿನ ಪ್ರಶ್ನೆ ಸಂಖ್ಯೆಯನ್ನು ಶ್ರೀಮತಿ ನಾಗರತ್ನಮ್ಮ ನವರು ಕೇಳಬೇಕು.

## ಅರಕಲ ಗೂಡಿನಲ್ಲಿ ಬಸ್ ನಿಲ್ದಾಣ

ಸಂಖ್ಯೆ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ). —ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಕಲಗೂಡಿನಲ್ಲಿ ಬಸ್ ನಿಲ್ದಾಣ ಇಲ್ಲದೇ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರೀ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ಹಾಗೂ ಅದನ್ನು ಯಾವಾಗ ಮಾಡಲಾಗುವುದು.

**ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).**—

ಅ) ಅರಕಲಗೂಡಿನಲ್ಲಿ ಬಸ್‌ನಿಲ್ದಾಣ ಸ್ಥಾಪಿಸಲಾಗಿದೆ.

ಆ) ಪೆಚ್ಚುತ್ತಿರುವ ಸಾರಿಗೆ ಸೇವೆಯನ್ನು ಪೂರೈಸಲು ಈಗಿನ ಬಸ್ ನಿಲ್ದಾಣವು ಅಸಮರ್ಥವಾಗಿದೆಯೆಂದು ಕಂಡು ಬಂದಿದೆ. ಅದಕ್ಕಾಗಿ ಬೇರೆ ಸ್ಥಳವನ್ನು ಆರಿಸಲಾಗಿದ್ದು ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡ ನಂತರ ಅತ್ಯಾಧುನಿಕ ಬಸ್ ನಿಲ್ದಾಣವನ್ನು ಒದಗಿಸಲಾಗುವುದು.

**ಶ್ರೀಮತಿ ಕೆ.ಎಸ್. ನಾಗರತ್ನಮ್ಮ.**—ಅರಕಲಗೂಡಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಶಂಕು ಸ್ಥಾಪನೆ ಮಾಡುವ ಸಮಯದಲ್ಲಿ, ಗುದ್ದಲಿಪೂಜೆ ಮಾಡುವ ಸಮಯದಲ್ಲಿ, ಈ ಸ್ಥಳ ಸರಿಯಿಲ್ಲ ಎಂದು ಗಲಾಟೆ ಆಗಿದ್ದುದು ನಿಜವೇ ? ಅಲ್ಲಿ ಊರು ಮತ್ತು ಕೋಟೆ ಎಂದು ಎರಡು ಭಾಗ ಇದ್ದು

ಸುಮಾರು ೫೨ ಎಕರೆ ಕೆರೆ ಇದ್ದ ಜಾಗವನ್ನು ಕೇಳಿರಂವುದು ನಿಜವಲ್ಲವೇ, ತಾಂತ್ರಿಕ ಅಡಚಣೆ ಇದೆ ಎಂದು ತಿರಸ್ಕರಿಸಿರಿವುದು ನಿಜವಲ್ಲವೇ, ಸಂಪೂರು ೫ ಎಕರೆ ಜಾಗ ವಿದ್ಯಾ ಇಲಾಖೆಯ ವಶದಲ್ಲಿದೆ, ಅದರಲ್ಲಿ ಮಾಡಿದರೆ ಅನುಕೂಲ ಎಂದು ಸಾರ್ವಜನಿಕರಿಂದ ಮನವಿ ಬಂದಿದೆ, ಆದ್ದರಿಂದ ಜನರ ಜೊತೆ ಸಮಾಲೋಚನೆ ಮಾಡಿ ಮುಂದೆ ಅಲ್ಲಿ ಬಸ್‌ಸ್ಟ್ಯಾಂಡ್ ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸ್ಥಳೀಯ ಶಾಸಕರಾದ ಹಾಗೂ ಮಂತ್ರಿಗಳಾಗಿರತಕ್ಕ ಮಾನ್ಯ ಮಲ್ಲಪ್ಪನವರು ಇಲ್ಲೇ ಇದ್ದಾರೆ. ನಾನು ಆ ಜಾಗಕ್ಕೆ ಹೋಗಿದ್ದೆ. ಈಗ ಇರತಕ್ಕ ಜಾಗ ಚಿಕ್ಕದು ದೊಡ್ಡ ಬಸ್‌ನಿಲ್ದಾಣ ಕಟ್ಟಬೇಕೆಂದು ಶಾಸಕರು, ಸ್ಥಳೀಯರು ಬಹಳ ಹಿಂದೆ ವರದಿ ಮಾಡಿದ್ದರು. ಸಾರ್ವಜನಿಕರಲ್ಲಿ ಅಲ್ಲಿರತಕ್ಕ ಊರು ಮತ್ತು ಕೋಟೆಯ ಭಾಗದ ಬಗ್ಗೆ ಭಿನ್ನಾಭಿಪ್ರಾಯ ಇರತಕ್ಕದ್ದು ನಿಜ, ಆದ್ದರಿಂದ, ಎಲ್ಲರಿಗೂ ಸಮರ್ಪಕವಾಗಿರತಕ್ಕ ರೀತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಜಾಗವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಅದು ಈಗಾಗಲೇ ನಮ್ಮ ವಶಕ್ಕೆ ಬಂದಿದೆ. ಅದರಿಂದ ಎಲ್ಲರಿಗೂ ಸಮಾಧಾನವಾಗಬಹುದು. ವರ್ಷಕ್ಕೆ ಮೂರು ಸಾವಿರ ರೂಪಾಯಿಂಗಳ ಲೀಸ್ ಪ್ರಕಾರ ಇಪ್ಪತ್ತೈದು ವರ್ಷಗಳವರೆಗೆ ಲೋಕೋಪಯೋಗಿ ಇಲಾಖೆಯವರು ಆ ಜಾಗವನ್ನು ನಮ್ಮ ವಶಕ್ಕೆ ಕೊಟ್ಟಿದ್ದಾರೆ. ಕೆಲಸ ಕೂಡ ಈಗಾಗಲೇ ಪ್ರಾರಂಭವಾಗಿದೆ.

## ಸಣ್ಣ ಉಳಿತಾಯ ಯೋಜನೆಯ ಬಗ್ಗೆ

೧೨೮೮. ಶ್ರೀ ಜ್ಞಾನದೇವ ದೊಡ್ಡವೇಟಿ (ರೋಣ).—ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಣ್ಣ ಉಳಿತಾಯ ಯೋಜನೆಯಿಂದ ರಾಜ್ಯದಲ್ಲಿ ಇದುವರೆವಿಗೂ ಸಂಗ್ರಹಿಸಿದ ಹಣ ಎಷ್ಟು ?

ಆ) ಸಣ್ಣ ಉಳಿತಾಯ ಯೋಜನೆಯ ಪ್ರಚಾರಕ್ಕಾಗಿ ಕೈಗೊಂಡ ಕ್ರಮಗಳೇನು ? ಹಾಗೂ ಅದಕ್ಕೆ ಖರ್ಚಾದ ಹಣ ಎಷ್ಟು ? (೩೧ನೇ ಜುಲೈ ೮೭ರವರೆಗೆ)

ಇ) ಈ ಕೈಗೊಂಡ ಕ್ರಮಗಳಿಂದ ಉಳಿತಾಯದಲ್ಲಿ ಏನಾದರೂ ಪ್ರಗತಿಯು ಕಂಡು ಬಂದಿದೆಯೇ ? ಬಂದಿದ್ದರೆ ಎಷ್ಟು ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಖಾತೆ ಮಂತ್ರಿಗಳು).—

ಅ) ಸಣ್ಣ ಉಳಿತಾಯ ಯೋಜನೆಯಿಂದ ರಾಜ್ಯದಲ್ಲಿ ಜುಲೈ ೮೭ರ ಅಂತ್ಯದವರೆಗೆ ಸಂಗ್ರಹವಾದ ಮೊತ್ತ ೨೫೫೫.೯೮ ಕೋಟಿ ರೂಪಾಯಿಗಳು.

ಆ) ಸಣ್ಣ ಉಳಿತಾಯ ಪ್ರಚಾರಕ್ಕಾಗಿ ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ. ಮುಖ್ಯವಾಗಿ ಕೈಗೊಂಡ ಕ್ರಮಗಳು ಈ ಕೆಳಗೆ ಕಾಣಿಸಿದಂತೆ ಇವೆ.

೧) ಕರಪತ್ರಗಳು/ಬಿಡ್ತಿ ಪತ್ರಗಳ ವಿತರಣೆ

೨) ನಮೂನೆಗಳು/ಪಾಸ್ ಪುಸ್ತಕಗಳ ಸರಬರಾಜು

೩) ಪತ್ರಿಕೆಗಳಲ್ಲಿ ಜಾಹೀರಾತು

೪) ಸಿನಿಮಾ ಸ್ಲೈಡು/ಚಲನಚಿತ್ರಗಳ ಮೂಲಕ ಪ್ರಚಾರ

೫) ಸಣ್ಣ ಉಳಿತಾಯ ಸಂಗ್ರಹಣೆಗಾಗಿ ಪಾದಯಾತ್ರೆ ಶಿಬಿರಗಳ ಏರ್ಪಾಡು

೬) ವಸ್ತು ಪ್ರದರ್ಶನಗಳಲ್ಲಿ ಸಣ್ಣ ಉಳಿತಾಯ ಪ್ರಚಾರ

೭) ಬೋರ್ಡಿಂಗ್/ವಾಲ್ ಪೈಂಟಿಂಗ್‌ಗಳ ಮೂಲಕ ಪ್ರಚಾರ

೮) ಸಣ್ಣ ಉಳಿತಾಯ ಕ್ಯಾಲೆಂಡರ್‌ಗಳ ವಿತರಣೆ

೯) ಸಣ್ಣ ಉಳಿತಾಯ ಕುರಿತು ಪತ್ರಿಕಾಗೋಷ್ಠಿ ಚರ್ಚಾ ಗೋಷ್ಠಿ ಏರ್ಪಾಡು